
# ನಾಂದಿಪದ

'ನಮ್ಮ ಬರಹಗಳಿಗೆ ಸರಿಯಾದ ವಿಮರ್ಶೆ ಸಿಗಲಿಲ್ಲ.' 'ನಾವು ಬರೆದುದ್ದನ್ನು ವಿಮರ್ಶಕರು ಗುರುತಿಸಲಿಲ್ಲ' ಎಂದು ಸಾಹಿತಿಗಳು ಆಗಾಗ ಗೊಣಗಿಕೊಳ್ಳುತ್ತಾರೆ. ಈ ವಿಮರ್ಶೆಯ ಮಾಯೆ ಅನೇಕ ಲೇಖಕರನ್ನು ಬಿಟ್ಟಿಲ್ಲ. ಒಂದು ವೇಳೆ ಕೃತಿಯ ಕುರಿತಾಗಿ ಅಂತಹ ಬರಹವೊಂದು ಬಂತು ಎಂದುಕೊಳ್ಳೋಣ. ಅದು ಕಟುವಾಗಿದ್ದರೆ ಕವಿಮನಸುಗಳು ಮುನಿಸಿಕೊಳ್ಳುತ್ತವೆ; ಅವಕ್ಕೆ ಮುದ್ದು ಮಾಡುವ ವಿಮರ್ಶೆ ಬೇಕು; ಮದ್ದಾಗುವ ಬರಹ ಅಲ್ಲ. ಪ್ರಶಂಸೆ ಕೃತಿಯೊಂದಕ್ಕೆ ಬೇಡ ಎಂದಲ್ಲ. ಓದುಗರಿಗೆ ತೋರುಬೆರಳಾಗುವ ಅದೂ ಬೇಕು. ಒಳ್ಳೆಯ ಕೃತಿಯೊಂದು ತನ್ನ ಬಗೆಗಿನ ಸ್ಪಂದನೆಯನ್ನು ತಾನೇ ಸೃಷ್ಟಿಸಿಕೊಳ್ಳುವಷ್ಟು ಸಮರ್ಥವಾಗಿರುತ್ತದೆ. ಅದಕ್ಕೆ 'ಕೇಳಿ ಬರೆಸಿಕೊಳ್ಳುವ' ಅಗತ್ಯ ಇರದು. ವಿಮರ್ಶೆ ಸಾಹಿತ್ಯ ಕೃತಿಯನ್ನು ಮಾತ್ರ ಅವಲಂಬಿಸಿ ಇರುವಂಥದ್ದು ಎಂಬ ತಿಳಿವಳಿಕೆ ಅನೇಕ ಸಾಹಿತಿಗಳಲ್ಲಿದೆ. ಅದು ಆಯಾ ಕಾಲದ ಕಾವ್ಯ, ಕತೆ, ಕಾದಂಬರಿ, ಕಲೆ, ಸಂಶೋಧನೆಯಲ್ಲೂ ಇರಬಹುದು. ನಿಜದ ಅರಸುವಿಕೆ, ವಿಮರ್ಶೆ ಎಲ್ಲ ಕಾಲದ ಕಲೆಗಳ, ಮನುಷ್ಯನ ಕ್ರಿಯಾಶೀಲ ಚಟುವಟಿಕೆಗಳ ಒಂದು ಭಾಗ. ಗೋಪಾಲಕೃಷ್ಣ ಅಡಿಗರ ಕಾವ್ಯ ಮತ್ತು ಪಿ. ಲಂಕೇಶರ ಗದ್ಯದಲ್ಲಿ ಅವರ ಕಾಲದ ರಾಜಕೀಯ, ಸಾಂಸ್ಕೃತಿಕ ವಿಮರ್ಶೆ ಇರುವುದು ಇದಕ್ಕೆ ಉತ್ತಮ ಉದಾಹರಣೆ.



ಗುರುದಾಸ ಶೆಣೈ

ಕವಿಯೊಬ್ಬನ ಕಾವ್ಯಕ್ಕೆ ಎಷ್ಟು 'ತೂಕ'ದ, ಎಷ್ಟು ಮಂದಿಯ ವಿಮರ್ಶೆ ಇದ್ದರೆ ಅದನ್ನು ಜನರು ಓದುತ್ತಾರೆ? ಇದಕ್ಕೆ ಸರಳ, ಸ್ಪಷ್ಟ ಉತ್ತರ ಯಾವ ಕಾಲಕ್ಕೂ ಸಿಕ್ಕಿಲ್ಲ. ವಿಮರ್ಶೆ, ಶಿಷ್ಯರ ಮೆಚ್ಚುಗೆಯ ಮಾತುಗಳಿಂದ ಸುತ್ತುವರೆದಿದ್ದ ವಿ.ಕೃ. ಗೋಕಾಕರಂತಹ ಸಾಹಿತಿಗಳನ್ನು ಈಗ ಯಾರೂ ಓದುತ್ತಿಲ್ಲ. ಕೆಲವರ ವರ್ಗದ ಕೋಣೆಯ ಟಿಪ್ಪಣಿಗಳಂತಹ ವಿಮರ್ಶೆಗಳು ಈಗ ಮಸುಕಾಗಿ ಕಣ್ಮರೆಯಾಗಿವೆ. ಅದರ ಆಯುಷ್ಯ ಅಚ್ಚರಿ ಎನಿಸುವಷ್ಟು ಕ್ಷಣಿಕ. ಮತ್ತದರ ಯಕ್ಷಿಣಿ ಸಹ ವಿಚಿತ್ರ. ಪಂಡಿತರ ಪ್ರಮಾಣ ಪತ್ರದ ಹಂಗು ತೊರೆದ ಕನ್ನಡದ ಹಲವು ಹಳೆಯ ಲೇಖಕರ ಕೃತಿಗಳು ತಮ್ಮ ಜೀವಂತಿಕೆಯಿಂದಾಗಿ ಇಂದಿಗೂ ಹೊಳೆಯುತ್ತಿವೆ. ಆದ್ದರಿಂದಲೇ ಕೃತಿಯನ್ನು ಆಧರಿಸಿ ಬರೆಯಲಾದ ಕನ್ನಡದ ಬಹುಪಾಲು ವಿಶ್ಲೇಷಣೆಯ ಬರಹಗಳು ತೀರಿಕೊಂಡಿವೆ. ಮನುಷ್ಯ ಬದುಕು, ಅದರಿಂದ ಹೊಮ್ಮಿದ ಬರಹ, ಅದರ ಕಲೆಗಾರಿಕೆಯನ್ನು ಅರಿಯಲು ಓದುಗರಿಗೆ ನೆರವಾಗುವ ಹೊಸ ಹೊಳಹು, ಒಳನೋಟದ ವಿಮರ್ಶೆ ಎಲ್ಲ ಕಾಲಕ್ಕೂ ಬೇಕು. ಅದಿಲ್ಲದೇ ದೊಡ್ಡ ಕೃತಿಯೊಂದರ ಎಲ್ಲೆ, ಆಳ, ಬಹುಸ್ತರವನ್ನು ಗುರುತಿಸುವುದು ಸಾಧ್ಯವಾಗದು. ಬಹುಕಾಲ ಕಾಲೇಜು ಮಾಸ್ತರರ ಆಸ್ತಿಯಾಗಿದ್ದ ವಿಮರ್ಶೆ, ವಿಮರ್ಶಕರೆಂಬ 'ಅಳಿವಿನಂಚಿನ ಜೀವಿಗಳು' ಈಗ ತೆರೆಯ ಮರೆಗೆ ಸರಿಯುತ್ತಿವೆ.

ಈ ಸಂಚಿಕೆಯಲ್ಲಿ ಕತೆಗಳೊಂದಿಗೆ ಇತ್ತೀಚೆಗೆ ಕಣ್ಮರೆಯಾದ ನಾಡು–ನುಡಿಯ ಹೋರಾಟಗಾರ ಕಯ್ಯಾರ ಕಿಂಞ್ಞಣ್ಣ ರೈ, ಸಂಶೋಧಕ ಎಂ.ಎಂ. ಕಲಬುರ್ಗಿ ಅವರ ಕುರಿತ ಬರಹಗಳಿವೆ. ಕನ್ನಡ ನುಡಿಯ ಈ ಸಾಧಕರಿಗೆ 'ಮಯೂರ'ದ ಅಂತಿಮ ನಮನ.

**ಸಂದೀಪ ನಾಯಕ**